ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ:www.kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

**ಕವಿಪ್ರನಿನಿ/ಬಿ57/11617/2020-21/ಭಾಗ-1** **ದಿನಾಂಕ:** - 2 NOV 2021

## ಅ ಧಿ ಸೂ ಚ ನೆ

**ವಿಷಯ:** ಸಹಾಯಕ ಇಂಜಿನಿಯರ್(ಸಿವಿಲ್)(ಪದವೀಧರರು) ಹುದ್ದೆಯಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಸಿವಿಲ್)(ಪದವೀಧರರು) ಹುದ್ದೆಗೆ ಪ್ರಭಾರ ವ್ಯವಸ್ಥೆಯಲ್ಲಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

**ಉಲ್ಲೇಖ:** 1. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 13.11.2020 ರಂದು ರಿಟ್ ಮೇಲ್ಮನವಿ ಸಂಖ್ಯೆ: 480/2020 (ಎಸ್-ಅರ್‌ಇಎಸ್) (ಬಿ. ಗುರುಮೂರ್ತಿ ಮತ್ತು ಇತರರು) ಪ್ರಕರಣದಲ್ಲಿ ನೀಡಿರುವ ಆದೇಶ.
2. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ ಬಿ100/25058/2021-22 ದಿನಾಂಕ 27.08.2021.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಕರ್ನಾಟಕ ಸರ್ಕಾರ ರವರ ಪತ್ರ ಸಂಖ್ಯೆ: ಎನರ್ಜಿ 176 ಇಇಬಿ 2021 ದಿನಾಂಕ: 22.10.2021.

---

ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 480/2020 (ಬಿ. ಗುರುಮೂರ್ತಿ ಮತ್ತು ಇತರರು) ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ಆದೇಶ ದಿನಾಂಕ: 13.11.2020 ರಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು, ಪ್ರಭಾರ ವ್ಯವಸ್ಥೆಯನ್ನು ಜಾರಿಗೊಳಿಸಲು ನಿರ್ದೇಶನ ನೀಡಿರುವುದರಿಂದ, ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಹಲವಾರು ಹುದ್ದೆಗಳು ದೀರ್ಘಾವಧಿಯಿಂದ ಖಾಲಿ ಇದ್ದು, ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗಿರುವುದರಿಂದ, ಈ ಕೆಳಕಂಡ ಸಹಾಯಕ ಇಂಜಿನಿಯರ್(ಸಿವಿಲ್)(ಪದವೀಧರರು) ರವರುಗಳನ್ನು ಅವರ ಹೆಸರುಗಳ ಮುಂದೆ ತಿಳಿಸಿರುವ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಸಿವಿಲ್)(ಪದವೀಧರರು) ಹುದ್ದೆಗಳಿಗೆ, ರಿಟ್ ಅರ್ಜಿ ಸಂಖ್ಯೆ:36133/2019 (ಬಿ. ಗುರುಮೂರ್ತಿ ಮತ್ತು ಇತರರು) ದಾವೆಯ ಅಂತಿಮ ತೀರ್ಪಿನ ಪರಿಣಾಮಗಳಿಗೊಳಪಟ್ಟು, ಈ ಕೆಳಗೆ ನಮೂದಿಸಿರುವ ಷರತ್ತುಗಳ ಅನ್ವಯ ಪ್ರಭಾರ ವ್ಯವಸ್ಥೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆದೇಶಿಸಿದೆ.

1. ಆಕ್ಷೇಪಿತ ಸೇವಾ ಹಿರಿತನ ಪಟ್ಟಿಯಲ್ಲಿ ಹೆಸರಿಸಿರುವ ಅಧಿಕಾರಿಗಳ ಸ್ಥಳನಿಯುಕ್ತಿಯನ್ನು ಕೇವಲ ಪ್ರಭಾರ ವ್ಯವಸ್ಥೆಯ ಮೂಲಕ ಮಾತ್ರ ಮಾಡಬಹುದಾಗಿದ್ದು, ಈ ವ್ಯವಸ್ಥೆಯು ರಿಟ್ ಅರ್ಜಿಗಳ ಮೇಲಿನ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
2. ಪ್ರಭಾರ ವ್ಯವಸ್ಥೆಯಲ್ಲಿ ಸ್ಥಳನಿಯುಕ್ತಿಗೊಂಡ ಅಧಿಕಾರಿಗಳು ಸದರಿ ಹುದ್ದೆಗಳ ಮೇಲೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. ಆದರೆ, ಸದರಿ ಅಧಿಕಾರಿಗಳು ನಿಗಮದ ಆಡಳಿತಾತ್ಮಕ ಹಿತದೃಷಿಯಿಂದ ಪ್ರಸ್ತುತ ಹುದ್ದೆಯ ಪ್ರಮುಖ ಮತ್ತು ಪ್ರಖ್ಯಾಯಿತ ಕರ್ತವ್ಯಗಳನ್ನು ನಿರ್ವಹಿಸಬಹುದಾಗಿರುತ್ತದೆ.
3. ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಭಾರ ವ್ಯವಸ್ಥೆಯನ್ನು ಮಾಡಲಾಗಿದ್ದು, ಈ ಆದೇಶದ

ಸೂಚನೆಗಳಂತೆ ಮಾಡಲಾಗುವ ಪ್ರಭಾರ ವ್ಯವಸ್ಥೆಯು ಈಗ ಉನ್ನತ ಹುದ್ದೆಗೆ ಪ್ರಭಾರವನ್ನು ಪಡೆಯುವ ಅಧಿಕಾರಿಗಳಿಗೆ ಮುಂದಿನ ದಿನಗಳಲ್ಲಿ ಪೂರ್ವಾನ್ವಯವಾಗಿ ಪದೋನ್ನತಿಗಾಗಿ ಹಕ್ಕು ಸಾಧಿಸಲು ಯಾವುದೇ ಅವಕಾಶವನ್ನು ಕಲ್ಪಿಸುವುದಿಲ್ಲ.

4. ಪ್ರಭಾರ ವ್ಯವಸ್ಥೆಯನ್ನು ಜಾರಿಗೊಳಿಸುವ ಪ್ರಕ್ರಿಯೆಯಲ್ಲಿ, ಎಲ್ಲಾ ವರ್ಗಗಳ ಅಧಿಕಾರಿಗಳಿಗೆ ನ್ಯಾಯ ಒದಗಿಸುವ ಹಿತದೃಷ್ಟಿಯಿಂದ ಹಾಲಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ನು ಪಾಲಿಸತಕ್ಕದ್ದು.
5. ಪ್ರಭಾರ ವ್ಯವಸ್ಥೆಯನ್ನು ಜಾರಿಗೊಳಿಸುವುದರ ಪರಿಣಾಮವಾಗಿ ಸದರಿ ರಿಟ್ ಅರ್ಜಿದಾರರ ಹುದ್ದೆಗಳಿಗೆ ಮತ್ತು ಅಧಿಕಾರಗಳಿಗೆ ರಿಟ್ ಅರ್ಜಿಯ ಮೇಲೆ ನೀಡಿರುವ ಮಧ್ಯಂತರ ಆದೇಶದಲ್ಲಿ ನೀಡಲಾಗಿರುವ ಸುರಕ್ಷತೆಗೆ ಯಾವುದೇ ಧಕ್ಕೆಯುಂಟಾಗುವಂತಿಲ್ಲ.
6. ಮೂಲ ನಡಾವಳಿಯ ಯಾವುದೇ ಕಕ್ಷಿದಾರರು ಈ ಪ್ರಭಾರ ವ್ಯವಸ್ಥೆಯನ್ನು ಅಥವಾ ತತ್ಪರಿಣಾಮವಾದ ಲಾಭಗಳನ್ನು ಅವರ ಪರವಾಗಿ ಅಥವಾ ಇತರರ ಹಿತಾಸಕ್ತಿಗೆ ವಿರುದ್ಧವಾಗಿ ಯಾವುದೇ ರೀತಿಯಲ್ಲಿ ಬಳಸುವಂತಿಲ್ಲ.

| ಕ್ರ ಸಂ | ಅಧಿಕಾರಿಯ ಹೆಸರು ಪಿಐಎನ್ ಶ್ರೀಯುತರು | ಕಾರ್ಯ ನಿರ್ವಹಿಸುತ್ತಿರುವ ಕಛೇರಿ | ಪ್ರಭಾರ ವ್ಯವಸ್ಥೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ |
|---|---|---|---|
| 1. | ಅವಿನಾಶ್ ಕುಮಾರ್ 15851 | ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ಕಾವೂರು, ಮಂಗಳೂರು | ಬೃಹತ್ ಕಾಮಗಾರಿ ಉಪವಿಭಾಗ, ಕವಿಪ್ರನಿನಿ, ಕಾವೂರು, ಮಂಗಳೂರು |

**ಷರತ್ತುಗಳು:**

1. ನಿಗಮದ ಆಡಳಿತಾತ್ಮಕ ಹಿತದೃಷಿಯಿಂದ ಮಾತ್ರವೇ ಪ್ರಭಾರ ವ್ಯವಸ್ಥೆ ಮಾಡಲಾಗಿದ್ದು, ಸದರಿ ವ್ಯವಸ್ಥೆಯು ತಾತ್ಕಾಲಿಕವಾಗಿರುತ್ತದೆ. ಈ ಪ್ರಭಾರ ವ್ಯವಸ್ಥೆಯನ್ನು ಯಾವುದೇ ಮುನ್ಸೂಚನೆ ನೀಡದೆಯೇ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
2. ಸದರಿ ಅಧಿಕಾರಿಗಳು ಕಾರ್ಯಭಾರ ವಹಿಸಿಕೊಂಡ ದಿನಾಂಕದಿಂದ ಪ್ರಭಾರ ಭತ್ಯೆಗೆ ಅರ್ಹರಿರುತ್ತಾರೆ. ವೇತನ ಹಾಗೂ ಇತರೆ ಭತ್ಯೆಗಳನ್ನು ವರದಿ ಮಾಡಿಕೊಂಡ ಕಚೇರಿಗಳಲ್ಲಿ ಪಡೆಯತಕ್ಕದ್ದು.
3. ಈ ವ್ಯವಸ್ಥೆಯು ರಿಟ್ ಅರ್ಜಿ ಸಂಖ್ಯೆ: 36133/2019(ಬಿ. ಗುರುಮೂರ್ತಿ ಮತ್ತು ಇತರರು), ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿನ ಪರಿಣಾಮಗಳಿಗೆ ಒಳಪಟ್ಟಿದೆ.

**ಸೂಚನೆಗಳು:**

1. ಆದೇಶದಲ್ಲಿ ಹೆಸರಿಸಲಾದ ಅಧಿಕಾರಿಗಳು ದಿನಾಂಕ: 12.11.2021 ರ ಒಳಗೆ ಕಾರ್ಯವಿಮುಕ್ತಿಗೊಳ್ಳಲು ಸೂಚಿಸಿದೆ.
2. ಸಂಬಂಧಿಸಿದ ವಿಸಕಂ.ಗಳ ವ್ಯವಸ್ಥಾಪಕ ನಿರ್ದೇಶಕರು, ಅಧಿಕಾರಿಗಳು ಸ್ಥಳನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ವರದಿ ಮಾಡಿಕೊಂಡ/ ಮಾಡಿಕೊಳ್ಳದಿರುವ ಬಗ್ಗೆ ತುರ್ತಾಗಿ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ವರದಿ ಮಾಡುವಂತೆ ಕೋರಿದೆ.
3. ಕಾರ್ಯವಿಮುಕ್ತಿಗೊಂಡ ಹಾಗೂ ವರದಿಮಾಡಿಕೊಂಡ ಸಿ.ಟಿ.ಸಿ ಪ್ರತಿಗಳನ್ನು ಅಧಿಕಾರಿಗಳು ಪ್ರತ್ಯೇಕವಾಗಿ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಡಳಿತ), ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು ಇವರಿಗೆ 'Attention to AGM(Admn.)'ಎಂದು ಬರೆದು ಹಾಗು ವ್ಯವಸ್ಥಾಪಕರು(ಸಿಬ್ಬಂದಿ-2), ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು ಇವರುಗಳಿಗೆ ಪ್ರತ್ಯೇಕವಾಗಿ

ಫ್ಯಾಕ್ಸ್ ಸಂಖ್ಯೆ 22278803/22291334 ಮತ್ತು ಅಂಚೆ ಮೂಲಕ ತಪ್ಪದೆ ಕಳುಹಿಸಲು ಕೋರಿದೆ. ಅಧಿಕಾರಿಯು ಸದರಿ ಸಿ.ಟಿ.ಸಿ ಪ್ರತಿಗಳನ್ನು ಇ-ಮೇಲ್ ಮೂಲಕ(manager_est1@yahoo.com) ಸಿಬ್ಬಂದಿ-1 ಶಾಖೆಗೆ ತಪ್ಪದೇ ತಿಳಿಸುವುದು.

'ವ್ಯವಸ್ಥಾಪಕ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ'

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),
ಕವಿಪ್ರನಿನಿ

**ಪ್ರತಿಗಳು**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ವಿಸಕಂಗಳು/ ಪಿಸಿಕೆಎಲ್
2. ಸರ್ಕಾರದ ಅಧೀನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಧಾನ ಸೌಧ, ಬೆಂಗಳೂರು
3. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ವಿಧಾನ ಸೌಧ, ಬೆಂಗಳೂರು
4. ಎಲ್ಲಾ ನಿರ್ದೇಶಕರು(ತಾಂತ್ರಿಕ), ವಿಸಕಂಗಳು
5. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ವಿಸಕಂಗಳು
6. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ವಿಸಕಂಗಳು
7. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/(ಪ್ರಸರಣ)/(ಆ. ಮತ್ತು ಮಾ.ಸಂ). ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು
8. ವ್ಯವಸ್ಥಾಪಕರು(ವೈದ್ಯಕೀಯ ಮತ್ತು ಇತರ ಸೇವೆಗಳು), ಕವಿಪ್ರನಿನಿ, ನಿಗಮ ಕಾರ್ಯಾಲಯ, ಬೆಂಗಳೂರು -ಅಧಿಕಾರಿಗಳ ವೈಯಕ್ತಿಕ ಕಡತಕ್ಕೆ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.karnataka.gov.in-->eprasaranaವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ವಿಸಕಂಗಳು
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂಗಳು
3. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ವಿಸಕಂಗಳು
4. ಸದರಿ ಅಧಿಕಾರಿಗಳಿಗೆ

ಪ್ರತಿಗಳು ಮಾಹಿತಿಗಾಗಿ:

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ(ನೋ.ಸಂ.659) & ನಿರ್ದೇಶಕರು ಕವಿಪ್ರನಿನಿ & ವಿಸಕಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ, ನಿರ್ದೇಶಕರು, ಕವಿಪ್ರನಿನಿ ಮತ್ತು ವಿಸಕಂಗಳು
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್.ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪ.ಜಾ./ ಪ.ಪಂ. ಅಧಿಕಾರಿಗಳ ಸಂಘ, ಬೆಂಗಳೂರು.